**ಸಾಕ್ಷಿಯನ್ನು ದಿಃ 04.10.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 311 ಅಡಿ ಸಲ್ಲಿಸಿದ ಅರ್ಜಿ ಮೇಲಿನ ಅದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ.ಈ.ಕೆ ವಕೀಲರಿಂದಃ–**

ನಾನು ಬಿ.ಎ ಪದವೀದರೆ. ನಾನು 2017 ರಲ್ಲಿ ಪದವಿ ಮುಗಿಸಿರುತ್ತೇನೆ. ನಾನು ಯಾವುದೆ ಕೆಲಸಕ್ಕೆ ಹೋಗುತ್ತಿರಲಿಲ್ಲ. ನನ್ನ ವಿದ್ಯಾಭ್ಯಾಸಕ್ಕೆ ತಕ್ಕಂತೆ ಕೆಲಸಕ್ಕೆ ಹೋಗಬಹುದಾಗಿತ್ತು ಎಂದರೆ ಸಾಕ್ಷಿ ಮಗುವಿನ ಜವಾಬ್ದಾರಿ ನನ್ನ ಮೇಲೆ ಇದ್ದ ಕಾರಣ ಕೆಲಸಕ್ಕೆ ಹೋಗಿಲ್ಲ ಎನ್ನುತ್ತಾರೆ. ಮದುವೆಗೂ ಮೊದಲು ನಾನು ಯಾವುದೆ ಕೆಲಸಕ್ಕೆ ಹೋಗಿಲ್ಲ. ನಾನು ಈಗ ಹುಣಸೂರಿನ ಹೊಸ ಮಾರುತಿ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸ ಇದ್ದೇನೆ. ಅಲ್ಲಿ ನಾನು ಮತ್ತು ನನ್ನ ಮಗು ವಾಸ ಇರುತ್ತೇವೆ. ನಾವು ಸದರಿ ಮನೆಯಲ್ಲಿ 2021 ರಿಂದ ವಾಸ ಇದ್ದೇವೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಮದುವೆ ಅದ ದಿನವೆ ನಾನು ಗಂಡನ ಮನೆಗೆ ಹೋಗಿದ್ದೆ. ಮದುವೆಯ ಸಂಪ್ರದಾಯದ ನಂತರ ಮದುವೆ ಅದ 1 ವಾರದ ನಂತರ ಹೋಗಿದ್ದೆ. ಗಂಡನ ಮನೆಯಲ್ಲಿ ನಾನು 1 1/2 ವರ್ಷ ಇದ್ದೆ. ನನ್ನ ಗಂಡನ ಮನೆಯಲ್ಲಿ ಗಂಡನ ಅಜ್ಜಿ, ಗಂಡನ ಇಬ್ಬರು ತಾಯಂದಿರು, ಗಂಡನ ಮೂರು ಜನ ಅಣ್ಣಂದಿರು, ಅವರ ಹೆಂಡತಿಯರು ಮತ್ತು ಅವರ ಮಕ್ಕಳು, ನಾನು ಮತ್ತು ನನ್ನ ಗಂಡ ಇದ್ದೇವು. ನನ್ನ ಗಂಡ ಕೆಲಸದಲ್ಲಿ ಇದ್ದ ಕಾರಣ ಹೋಗುವುದು ಮತ್ತು ಬರುವುದು ಮಾಡುತ್ತಿದ್ದರು. ಗಂಡ ಕೆಲಸಕ್ಕೆ ಹೋದ ನಂತರ ಗಂಡನ ಮನೆಯಲ್ಲೆ ಇದ್ದಿರಾ ಎಂದರೆ ಸಾಕ್ಷಿ ಗಂಡನ ಮನೆಯಲ್ಲಿ ಬಿಟ್ಟು ಹೋದರೆ ಅಲ್ಲೆ ಇರುತ್ತಿದ್ದೆ ತಂದೆ ಮನೆಯಲ್ಲಿ ಬಿಟ್ಟು ಹೋದ ಕಾರಣ ತಂದೆ ಮನೆಯಲ್ಲಿ ಇದ್ದೆ ಎನ್ನುತ್ತಾರೆ. ಗಂಡನ ಮನೆಯಲ್ಲಿ ಗಂಡನ ಅಜ್ಜಿ ಮತ್ತು ಇಬ್ಬರು ತಾಯಂದಿರ ಖರ್ಚು ವೆಚ್ಚವನ್ನು ನನ್ನ ಗಂಡನೆ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಭಾವಂದಿರು ಸಹ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ಗಂಡ ಮುನೇರಾಬಾದ್ ಕೊಪ್ಪಳ ಜಿಲ್ಲೆಯಲ್ಲಿ ಪೊಲೀಸ್ ಕೆಲಸ ಮಾಡುತ್ತಿದ್ದು, ಅಲ್ಲಿಗೆ ನನಗೆ ಹೋಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಕರೆದುಕೊಂಡು ಹೋಗಿದ್ದರು,

ನಾನು ಗರ್ಭಿಣಿ ಅದ ಕಾರಣ ವಾಪಸ್ಸು ಕರೆದುಕೊಂಡು ಬಂದು ಬಿಟ್ಟಿದ್ದರು ಎನ್ನುತ್ತಾರೆ. ಹಾಗೆ ಗಂಡ ಕರೆದುಕೊಂಡು ಹೋದಾಗ ಗಂಡ ಚೆನ್ನಾಗಿ ನೋಡಿಕೊಂಡಿದ್ದರು ಎಂದರೆ ಸಾಕ್ಷಿ ಬೇಜವಾಬ್ದಾರಿಯಿಂದ ನೋಡಿಕೊಂಡಿದ್ದರು ಎನ್ನುತ್ತಾರೆ. ಬೇಜವಾಬ್ದಾರಿಯಿಂದ ನೋಡಿಕೊಂಡಿದ್ದು ಎಂದರೆ ಹೇಗೆ ಎಂದರೆ ಸಾಕ್ಷಿ ಗಂಡನು ತನಗೆ ಅಲಾಟ್ ಆದ ಕ್ವಾಟ್ರಸ್ ನಲ್ಲಿ ಇರಿಸಿರಲಿಲ್ಲ ಬದಲಾಗಿ ಜಗದೀಶ್ ಎಂಬುವವರ ಕ್ವಾಟ್ರಸ್ ನಲ್ಲಿ ಇರಿಸಿಕೊಂಡು ಅವರ ಆಗು ಹೋಗುಗಳನ್ನು ನೋಡಿಕೊಳ್ಳಬೇಕು ಎಂದು ನನಗೆ ಹಿಂಸೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ಎದುರುದಾರರು ತನಗೆ ಕ್ವಾಟ್ರಸ್ ಸಿಕ್ಕಿದ ನಂತರ ಕರೆದುಕೊಂಡು ಹೋಗುವುದಾಗಿ ನನಗೆ ಹೇಳಿದ್ದರು ಎಂದರೆ ಸರಿ. ಅದೆ ರೀತಿ ಕ್ವಾಟ್ರಸ್ ಸಿಕ್ಕಿದ ನಂತರ ನನಗೆ ಅಲ್ಲಿಗೆ ಕರೆದುಕೊಂಡು ಹೋದರು ಎಂದರೆ ಕ್ವಾಟ್ರಸ್ ಸಿಕ್ಕ 3 ತಿಂಗಳು ಆದರೂ ನನಗೆ ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ಅಲ್ಲಿಗೆ ಕರೆದುಕೊಂಡು ಹೋದ ನಂತರ ಗಂಡನೊಂದಿಗೆ ಹೊಂದಿಕೊಳ್ಳದೆ ಅಲ್ಲಿ ವಿಪರೀತ ಬಿಸಲು ಎಂದು ನಾನು ವಾಪಸ್ಸು ಬಂದಿರುತ್ತೇನೆ ಎಂದರೆ ಸರಿಯಲ್ಲ. 2019 ರಲ್ಲಿ ಎದುರುದಾರ ನನ್ನ ಗಂಡ ನನ್ನ ಮೇಲೆ ಡಿವೋರ್ಸ್ ಕೇಸ್ ಹಾಕಿದ್ದರು ಎಂದರೆ ಸರಿ. ಮದುವೆ ಅದ ನಂತರ ದಿಃ 12.03.2019 ರಿಂದ ನಾವು ಬೇರೆ ಬೇರೆ ವಾಸ ಇದ್ದೇವೆ. 2019 ರಲ್ಲಿ ಎದುರುದಾರರು ಡಿವೋರ್ಸ ಕೇಸ್ ಹಾಕಿದ ನಂತರ ನಾನು 2021 ರಲ್ಲಿ ಈ ಕೇಸ್ ಹಾಕಿರುತ್ತೇನೆ ಎಂದರೆ ಸರಿ. 2019 ರಲ್ಲಿಯೆ ಈ ಕೇಸ್ ಅನ್ನು ಹಾಕಲು ಯಾವುದೆ ತೊಂದರೆ ಇರಲಿಲ್ಲ ಎಂದರೆ ಚಿಕ್ಕ ಮಗು ಇದ್ದ ಕಾರಣ ಕೇಸ್ ಅನ್ನು ಟ್ರಾನ್ಸ್ಫರ್ ಮಾಡಿಸಿಕೊಳ್ಳಲು ಓಡಾಡುತ್ತಿದ್ದೆ ಎಂದು ನುಡಿಯುತ್ತಾರೆ. ಆರ್ಥಿಕವಾಗಿ ನಾನು ಚೆನ್ನಾಗಿ ಇದ್ದ ಕಾರಣ ನಾನು ಯಾವುದೆ ಕೇಸ್ ಅನ್ನು ಹಾಕಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಡಿವೋರ್ಸ್ ಕೇಸ್ ಹಾಕಿದ ಕಾರಣ ನಾನು ಈ ಕೇಸ್ ಅನ್ನು ಅವರ ಮೇಲೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಶ್ರೀ ಮಹಾವೀರ ಬಿ.ಎಡ್ ಕಾಲೇಜು ಹುಣಸೂರಿನಲ್ಲಿ ನಾನು ಪ್ರಥಮ ವರ್ಷದ ಬಿ.ಎಡ್ ಮಾಡುತ್ತಿದ್ದೇನೆ. ನಾನು ಸದರಿ ಕಾಲೇಜಿಗೆ 2025 ರಲ್ಲಿ ದಾಖಲಾಗಿದ್ದೇನೆ. ಪ್ರತಿವರ್ಷದ ಕಾಲೇಜು ಫೀ 70 ಸಾವಿರ ರೂ. ಇರುತ್ತದೆ. ನಾನು ಆರ್ಥಿಕವಾಗಿ ಚೆನ್ನಾಗಿರುವ ಕಾರಣ ಕಾಲೇಜು ವಿದ್ಯಾಭ್ಯಾಸವನ್ನು

ಮುಂದುವರೆಸುತ್ತಿದ್ದೆ ಎಂದರೆ ಸಾಕ್ಷಿ ಕೈ ಸಾಲ ಮಾಡಿ ಮುಂದುವರೆಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಲ ಮಾಡಿದ ಬಗ್ಗೆ ಯಾವುದೆ ದಾಖಲೆ ಹಾಜರು ಪಡಿಸಿಲ್ಲ. ನಾನು ಹುಣಸೂರು ಪಟ್ಟಣದಲ್ಲಿ ಒಂದು ಮನೆ ಕಟ್ಟಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ನಾನು ಈ ಕೇಸಿನ ಅರ್ಜಿಯಲ್ಲಿ ಸಲ್ಲಿಸಲು ನಮ್ಮ ವಕೀಲರಿಗೆ ನಾನೆ ಮಾಹಿತಿ ಕೊಟ್ಟಿರುತ್ತೇನೆ ನಮ್ಮ ವಕೀಲರು ಅರ್ಜಿ ತಯಾರಿಸಿದ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಸಾಮಾನ್ಯವಾಗಿ ನೌಕರಿ ಪಡೆದುಕೊಳ್ಳಲು ಪರೀಕ್ಷೆ ಬರೆಯಬೇಕಾಗುತ್ತದೆ, ಸರ್ಕಾರದ ಸುತ್ತೂಲೆಯನ್ನು ಅನುಸರಿಸಬೇಕಾಗುತ್ತದೆ ಎಂದರೆ ಸರಿ. ಪಿ.ಎಸ್.ಐ ಹುದ್ದೆಗೆ ಸೇರಲು ತವರು ಮನೆಯಿಂದ 10 ಲಕ್ಷ ರೂ. ಹಣ ತೆಗೆದುಕೊಂಡು ಬರುವಂತೆ ಎದುರುದಾರರು ನನಗೆ ಹೇಳುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವರುದ್ರ ಎಂಬುವವರು ಗೊತ್ತು ಅವರು ನನ್ನ ತಂದೆಯ ತಂಗಿಯ ಮಗ. ಅವರಿಗೆ ಮದುವೆ ಆಗಿದೆಯೊ ಇಲ್ಲವೊ ನನಗೆ ಗೊತ್ತಿಲ್ಲ. ಅವರು ನಮ್ಮ ಸಂಬಂಧಿಕರಾದ ಕಾರಣ ನಾವು ಅವರ ಮನೆಗೆ ಹೋಗುವುದು ಅವರು ನಮ್ಮ ಮನೆಗೆ ಬರುವುದು ಮಾಡುತ್ತಿದ್ದರು ಎಂದರೆ ಸಾಕ್ಷಿ ನಮ್ಮ ತಂದೆ ತಾಯಿ ಹೋಗುತ್ತಿದ್ದರು ಎನ್ನುತ್ತಾರೆ. ಶಿವರುದ್ರ ರವರು ಮತ್ತು ನಾನು ಫೋನ್ ಕಾನ್ಟೆಕ್ಟ್ ನಲ್ಲಿ ಇದ್ದೇವೆ ಎಂದರೆ ಸರಿಯಲ್ಲ, ಮುಂದುವರೆದು ನಮ್ಮ ತಂದೆಗೆ ಹುಷಾರಿಲ್ಲದಿದ್ದಾಗ ನಾನು ಅವರೊಂದಿಗೆ ಮಾತನಾಡಿದ್ದೆ ಎನ್ನುತ್ತಾರೆ. ನಮ್ಮ ತಂದೆಗೆ ಹುಷಾರಿಲ್ಲದಿದ್ದಾಗ ಅವರನ್ನು ನೋಡಲು ನಮ್ಮ ಮಾವ ಮತ್ತು ಅವರ ಮಗ ಶಿವರುದ್ರ ರವರು ಬಂದಿದ್ದರು. ಆ ರೀತಿ ಯಾವಾಗ ಬಂದಿದ್ದರು ಎಂದು ದಿನಾಂಕ ಹೇಳಲು ಆಗುವುದಿಲ್ಲ. ನಾನು ಮತ್ತು ಶಿವರುದ್ರ ಫೋನ್ ಕಾನ್ಟೆಕ್ಟ್ ಇದ್ದಿದ್ದು ಆಗಾಗ್ಗೆ ಮಾತನಾಡುತ್ತಿದ್ದೇವು ಎಂದರೆ ಸರಿಯಲ್ಲ. ನಾನು ಅವರಿಗೆ ಕೋರಿಯರ್ ಸಹ ಕಳುಹಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು ಕೋರಿಯರ್ ಅನ್ನು ಶಿವರುದ್ರ ರವರಿಗೆ ಕಳುಹಿಸುತ್ತಿದ್ದೆ, ಅವರೂ ಸಹ ನನಗೆ ಕಳುಹಿಸುತ್ತಿದ್ದರು ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಗಲಾಟೆ ಸಹ ಆಗಿದೆ ಎಂದರೆ ಸರಿಯಲ್ಲ, ಗಂಡ ಕೋರಿಯರ್ ಕಳುಹಿಸಿದ ವಿಚಾರವಾಗಿ ಗಲಾಟೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ವಿಚಾರವಾಗಿ ಗಲಾಟೆ ಆಗಿ ನನ್ನ ಮೇಲೆ ಮತ್ತು ಇನ್ನಿಬ್ಬರ ಮೇಲೆ ಎಫ್.ಐ.ಆರ್ ಆಗಿರುತ್ತದೆ ಎಂದರೆ ಗಂಡನ ಒಳಸಂಚಿನಿಂದ ಆ ರೀತಿ ಆಗಿದೆ ಎನ್ನುತ್ತಾರೆ.

ನಾನು ಕೋರಿಯರ್ ಕಳುಹಿಸಿದ ವಿಚಾರವಾಗಿ ಗಂಡನು ನನ್ನನ್ನು ಕೇಳಿದ್ದಕ್ಕೆ ಗಲಾಟೆ ಆಗಿ ಬಗ್ಗೆ ಶಿವರುದ್ರ ರವರ ಮೂಲಕ ಸುಳ್ಳು ದೂರನ್ನು ಸಹ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಕೇಸು ಬೆಂಗಳೂರು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಾಲಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.